16.12-2024

(39)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜುರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ಪ್ರಶ್ನೆ**

ದಿನಾಂಕ:10/12/2024ರಂದು "ಸುವರ್ಣ ಸೌಧದ ಊರಿನಲ್ಲಿಲ್ಲ ಹೈಸ್ಕೂಲ್" ಎಂದು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

"ಬೆಳಗಾವಿ ಸುವರ್ಣಸೌಧ ನಿರ್ಮಾಣಕ್ಕೆ ತಮ್ಮ ಜಮೀನು ಬಿಟ್ಟು ಕೊಟ್ಟ ಊರಿನ ಜನರ ಸಮಸ್ಯೆ ಕೇಳುವರು ಇಲ್ಲದಂತಾಗಿದೆ. ಇಡೀ ರಾಜ್ಯದ ಸಮಸ್ಯೆಗಳನ್ನೆಲ್ಲಾ ಚರ್ಚೆ ಮಾಡುವ ಸೌಧದ ಮೂಲ ಜಮೀನು ಮಾಲೀಕರ ಕುಟುಂಬದ ಕುಡಿಗಳು ಪ್ರೌಢಶಾಲೆಗಾಗಿ ಹಲವು ವರ್ಷಗಳಿಂದ ಮನವಿ ಮಾಡುತ್ತಾ, ಬರುತ್ತಿದ್ದರೂ ಸಂಬಂಧಪಟ್ಟವರು ಕಿವಿಗೊಡುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ, ಬಸ್ತವಾಡ ಇದು ಉತ್ತರ ಕರ್ನಾಟಕದ ಶಕ್ತಿಕೇಂದ್ರ ಸುವರ್ಣ ವಿಧಾನಸೌಧಕ್ಕೆ ಜಾಗ ಕೊಟ್ಟ ಊರು. ಇಡೀ ರಾಜ್ಯದ ಸಮಸ್ಯೆಗಳೇ ಅಲ್ಲಿ ಚರ್ಚೆಯಾಗುತ್ತವೆ. ಆದರೆ, ಊರಿನ ಮಕ್ಕಳ ಸಮಸ್ಯೆ ಕೇಳುವವರು ಯಾರೂ ಇಲ್ಲ.

ಪ್ರೌಢಶಾಲಾ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಬೇರೆ ಊರಿನ ಶಾಲೆಗಳನ್ನೇ ಅವಲಂಬಿಸಬೇಕಿದೆ. ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದ ಮಕ್ಕಳ ಶೈಕ್ಷಣಿಕ ಸಮಸ್ಯೆಯ ಗೋಳಿನ ಕಥೆ ಇದು. ಸುಮಾರು 7 ಸಾವಿರ ಜನಸಂಖ್ಯೆ ಹೊಂದಿರುವ ಇಲ್ಲಿ ಕೇವಲ 7ನೇ ತರಗತಿಯವರೆಗೆ ಮಾತ್ರ ಸರ್ಕಾರಿ ಶಾಲೆ ಇದೆ. ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣಕ್ಕೆ ಪಕ್ಕದ ಊರುಗಳಿಗೆ ಹೋಗುವ ಅನಿವಾರ್ಯತೆ ಕಾಡುತ್ತಿದೆ, ಬಸ್ತವಾಡ ಗ್ರಾಮದ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1ನೇ ತರಗತಿಯಿಂದ 7ನೇ ತರಗತಿಯವರೆಗೆ 307 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರೆ ಮರಾಠಿ ಶಾಲೆಯಲ್ಲಿ 160 ಮಕ್ಕಳು ಕಲಿಯುತ್ತಿದ್ದಾರೆ, ಮುಂದಿನ ಶಿಕ್ಷಣಕ್ಕೆ ಇವರೆಲ್ಲಾ 2 ಕಿ.ಮೀ ಅಂತರದಲ್ಲಿರುವ ಹಲಗಾ, 10 ಕಿ.ಮೀ ಕ್ರಮಿಸಿ ಕೆ.ಕೆ. ಕೊಪ್ಪ, 8 ಕಿ.ಮೀ ದೂರದ ಮಾಸ್ತಮರಡಿ ಇಲ್ಲವಾದರೆ12 ಕಿ.ಮೀ ಪ್ರಯಾಣಿಸಿ ಬೆಳಗಾವಿಗೆ ಹೋಗಬೇಕು" ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಪ್ರಯುಕ್ತ ಸುವರ್ಣ ವಿಧಾನಸೌಧಕ್ಕೆ ಗ್ರಾಮಸ್ಥರು ತಮ್ಮ ತಮ್ಮ ಜಮೀನುಗಳನ್ನು ಬಿಟ್ಟುಕೊಟ್ಟಿರುವುದರಿಂದ ಬಸ್ತಾವಾಡ ಗ್ರಾಮದಲ್ಲಿ ಒಂದು ಪ್ರೌಢಶಾಲೆಯನ್ನು ನಿಯಮಾನುಸಾರ ಪ್ರಾರಂಭಿಸುವ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಉತ್ತರ**

ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದ ಸಮೀಪ ಸುವರ್ಣಸೌಧವನ್ನು ನಿರ್ಮಿಸಲಾಗಿದ್ದು, ಬಸ್ತವಾಡ ಗ್ರಾಮವು ಸುಮಾರು 7000 ಜನಸಂಖ್ಯೆಯುಳ್ಳ ಗ್ರಾಮವಾಗಿರುತ್ತದೆ. ಬಸ್ತವಾಡ ಗ್ರಾಮದ ಪಕ್ಕದಲ್ಲಿ ಹಲಗಾ ಗ್ರಾಮವು 2 ಕಿ.ಮೀ ಅಂತರದಲ್ಲಿ ಇದ್ದು, ಹಲಗಾ ಮತ್ತು ಬಸ್ತವಾಡ ಗ್ರಾಮದಲ್ಲಿ ಈ ಕೆಳಕಾಣಿಸಿದ ಪ್ರೌಢಶಾಲೆಗಳು ಇರುತ್ತವೆ.

1. ಜೆ.ಆರ್. ಡಿ ಕನ್ನಡ ಮತ್ತು ಮರಾಠಿ ಅನುದಾನಿತ ಪ್ರೌಢಶಾಲೆ, ಹಲಗಾ
2. ಶಾರದಾ ಮರಾಠಿ ಮಾಧ್ಯಮ ಅನುದಾನಿತ ಪ್ರೌಢಶಾಲೆ, ಹಲಗಾ.
3. ಭರತೇಶಸೆಂಟ್ರಲ ಆಂಗ್ಲ ಮಾಧ್ಯಮ (ಸಿ.ಬಿ.ಎಸ್.ಇ), ಹಲಗಾ.

4. ಮರಾಠ ಮಂಡಳ ಸಂಸ್ಥೆಯ ಮರಾಠಿ ಮಾಧ್ಯಮದ ಅನುದಾನರಹಿತ ಪ್ರೌಢಶಾಲೆ, ಬಸ್ತವಾಡ.

ಮುಂದುವರೆದು, ಬಸ್ತವಾಡ ಮತ್ತು ಹಲಗಾ ಎರಡು ಅವಳಿ ಗ್ರಾಮಗಳಾಗಿದ್ದು, ಮೇಲ್ಕಾಣಿಸಿದಂತೆ 2 ಅನುದಾನಿತ ಪ್ರೌಢಶಾಲೆಗಳು 2 ಅನುದಾನರಹಿತ ಪ್ರೌಢಶಾಲೆಗಳು ಇರುತ್ತವೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಬೇಕಾದರೆ ಕೇಂದ್ರ ಶಿಕ್ಷಣ ಮಂತ್ರಾಲಯದ ಈ ಕೆಳಕಂಡ ಮಾನದಂಡಗಳನ್ನು ಹೊಂದಿರಬೇಕಾಗುತ್ತದೆ.

1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8ನೇ ತರಗತಿ ಹೊಂದಿರಬೇಕು.
2. ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸುವ ಶಾಲೆಯ 8 ನೇ ತರಗತಿಯಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ 70 ಇರಬೇಕು.
3. 5 ಕಿಮೀ ವ್ಯಾಪ್ತಿಯೊಳಗೆ ಯಾವುದೇ (ಸರ್ಕಾರಿ/ಅನುದಾನಿತ/ಅನುದಾನರಹಿತ) ಪ್ರೌಢ ಶಾಲೆ ಇರಬಾರದು.
4. ಜಿ.ಐ.ಎಸ್. ಮ್ಯಾಪಿಂಗ್ ಕಡ್ಡಾಯವಾಗಿ ನಿರ್ವಹಣೆಯಾಗಿರಬೇಕು.

ಮೇಲ್ಕಂಡ ಕೇಂದ್ರ ಶಿಕ್ಷಣ ಮಂತ್ರಾಲಯ ಮಾನದಂಡಗಳ ಅನುಸಾರ ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದ 2 ಕಿ.ಮೀ ವ್ಯಾಪ್ತಿಯಲ್ಲಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳು ಇರುವುದರಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಉನ್ನತೀಕರಿಸಲು ಮತ್ತು ಹೊಸ ಪ್ರೌಢ ಶಾಲೆಯನ್ನು ಪ್ರಾರಂಭಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

**ಇಪಿ 240 ಎಸ್‌ಒಹೆಚ್ 2024**

**(ಎಸ್. ಮಧು ಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**